**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ :04.02.2025**

**ಪಾಟೀ ಸವಾಲು - 2 ನೇ ಪ್ರತಿವಾದಿ ಪರ ವಕೀಲರಿಂದ :**

ನಾನು ಎಸ್ ಎಸ್ ಎಲ್ ಸಿ ಓದಿರುತ್ತೇನೆ. ನನ್ನ ತಂದಗೆ ಇಬ್ಬರು ಮಕ್ಕಳು. ನಮ್ಮ ತಾತನ ಹೆಸರು ಚಿಕ್ಕಕೆಂಪಣ್ಣ . ಚಿಕ್ಕಕೆಂಪಣ್ಣರವರಿಗೆ 8 ಜನ ಮಕ್ಕಳು ಅವರು ಪಿಳ್ಳಮ್ಮ, ನಾರಾಯಣಪ್ಪ, ಮಾರಪ್ಪ, ಕೃಷ್ಣಪ್ಪ, ಮುನಿಯಪ್ಪ, ರಾಮಣ್ಣ , ಜಯಮ್ಮ ಮತ್ತು ಮಾರಮ್ಮ ಆಗಿರುತ್ತಾರೆ. ಅವರ ಮಧ್ಯೆ ಯಾವುದೇ ನೊಂದಾಯಿತ ವಿಭಾಗ ಅಥವಾ ನ್ಯಾಯಾಲಯದ ಮುಖಾಂತರ ವಿಭಾಗ ಡಿಕ್ರಿ ಆಗಿರುವುದಿಲ್ಲ. ಸದರಿ ವಿಚಾರವನ್ನು ವಾದ ಪತ್ರದಲ್ಲಿ ಹೇಳಲು ಯಾವುದೇ ತೊಂದರೆ ಇರಲಿಲ್ಲ. ಈ ದಾವೆಯಲ್ಲಿ ಅವರನ್ನು ಪಕ್ಷಗಾರನ್ನಾಗಿ ಮಾಡಲು ಯಾವುದೇ ತೊಂದರೆ ಇರಲಿಲ್ಲ. ನನ್ನ ವಿಚಾರಣೆಯಲ್ಲಿ ನಮ್ಮ ತಂದಗೆ ದಾವ ಸ್ವತ್ತುಗಳು ಹೇಗೆ ಬಂದವು ಎಂದು ತಿಳಿಸಿರುವುದಿಲ್ಲ. ಪಿಳ್ಳಮ್ಮ ಮತ್ತು ಮಾರಮ್ಮರವರು ಅವರ ಸಹೋದರರಿಗೆ ಮಾಡಿಕೊಟ್ಟಿರುವ ಹಕ್ಕು ಬಿಡುಗಡೆ ಪತ್ರದ ಪ್ರತಿಯನ್ನು ನೋಡಿ ಒಪ್ಪಿ ಕೊಂಡು ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಜಯಮ್ಮರವರು ಯಾವುದೇ ಹಕ್ಕು ಬಿಡುಗಡೆ ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ. ನಿಡಿ-1 ರ ಪ್ರಕಾರ ಹೆಣ್ಣು ಮಕ್ಕಳಿಗೆ ಯಾವುದೇ ಹಣ ಅಥವಾ ಆಸ್ತಿಯನ್ನು ನೀಡಿರುವುದಿಲ್ಲ ಎಂದರೆ ಸರಿ. ಸದರಿ ಪಿಳ್ಳಮ್ಮರವರ ಮಗಳು ನಮ್ಮ ತಾಯಿ ಎಂದರೆ ಸರಿ. 2 ನೇ ಪ್ರತಿವಾದಿ ಪಿಳ್ಳಮ್ಮವರವರ ಮನೆಯಲ್ಲಿ ಹುಟ್ಟಿದ್ಯಾಗಿನಿಂದ ಇದ್ದರು ಎಂದರೆ 10 ವರ್ಷ ಇದ್ದರು ಎಂದು ನುಡಿಯುತ್ತೇನೆ. ಅವರು ಎಸ್ ಎಸ್ ಎಲ್ ಸಿ ಮುಗಿಸಿ ನಮ್ಮ ಊರಿಗೆ ಬಂದಿರುತ್ತಾರೆಂದರೆ ಸರಿ. ನಮ್ಮ ತಾಯಿ 2011 ರಲ್ಲಿ ಕ್ಯಾನ್ಸರ್ ಖಾಯಿಲೆಯಿಂದ ಮೃತರಾಗಿರುತ್ತಾರೆಂದರೆ ಸರಿ. ನಮ್ಮ ತಾಯಿ ಮರಣ ನಂತರ 1 ನೇ ಪ್ರತಿವಾದಿಯನ್ನು ನಾನು ಮತ್ತು 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದವು ಎಂದರೆ ನಾನು ಒಬ್ಬನೇ ನೋಡಿಕೊಳ್ಳುತಿದ್ದೇನೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಇವತ್ತಿಗೂ ನನ್ನ ಜೊತೆ ಇರುತ್ತಾರೆ. ನನಗೆ ಮತ್ತು 2 ನೇ ಪ್ರತಿವಾದಿಗೆ 1 ನೇ ಪ್ರತಿವಾದಿ ಮದುವೆ ಮಾಡಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪತ್ರವನ್ನು ಓದಿ ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ 6 ನೇ ಪ್ಯಾರದಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಶಾಮೀಲಾಗಿ ಆಸ್ತಿ ವಿಚಾರದಲ್ಲಿ ನನಗೆ ಮೋಸ ಮಾಡುತ್ತಿದ್ದಾರೆಂದು ಹೇಳಿದ್ದೇನೆಂದರೆ ಸರಿ. ನಾನು ಮತ್ತು 2 ನೇ ಪ್ರತಿವಾದಿ ನಾವು ವಾಸಿಸುವ ಮನೆಯನ್ನು ಸಮಾನವಾಗಿ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ನಾನು ಪೂರ್ವ ಭಾಗದಲ್ಲಿ ವಾಸಿಸುತ್ತಿದ್ದು, 2 ನೇ ಪ್ರತಿವಾದಿ ಪಶ್ಚಿಮ ಭಾಗ ವಾಸಿಸುತ್ತಿದ್ದಾರೆಂದರೆ ಸರಿ. ದಾವ ಸ್ವತ್ತುಗಳ ಬಗ್ಗೆ ನಾನು ಮತ್ತು ಪ್ರತಿವಾದಿಗಳು 2019 ರಲ್ಲಿ ಒಂದು ಪಾಲು ಪಟ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಅದರ ಪ್ರಕಾರ ದಾವ ಸ್ವತ್ತುಗಳು ನಮ್ಮ ಮಧ್ಯೆ ಸಮಾನವಾಗಿ ಹಂಚಿಕೆ ಆಗಿದೆ

ಎಂದರೆ ಸರಿ. ಊರಿನಲ್ಲಿರುವ ಮನೆಯನ್ನು ಈ ದಾವೆಯಲ್ಲಿ ಸೇಸಿರುವುದಿಲ್ಲ ಎಂದರೆ ಸರಿ. ಸದರಿ ಆಸ್ತಿ ನಮ್ಮ ತಂದೆಯ ಹೆಸರಿನಲ್ಲಿದೆ. ನಮ್ಮ ಕುಟಂಬದ ಯಾಜಮಾನಿಕ್ಕೆಯನ್ನು 1 ನೇ ಪ್ರತಿವಾದಿ ಮಾಡುತ್ತಿದ್ದಾರೆಂದರೆ ಸರಿಯಲ್ಲ. ಆಸ್ತಿಯಿಂದ ಬಂದ ಆದಾಯ 1 ನೇ ಪ್ರತಿವಾದಿಯ ಕೈ ಸೇರುತ್ತಿದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಸೇರುತ್ತಿದೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ. ದಾವ ಐಟಂ 7 ವಿಜಯಪುರ – ಚನ್ನರಾಯಪ್ಪಟ್ಟಣ್ಣ ಮುಖ್ಯ ರಸ್ತೆಯಲ್ಲಿರುತ್ತದೆ ಎಂದರೆ ಸರಿ. ಈಗ ಅಲ್ಲಿ ಒಂದು ಗುಂಟೇ ಬೆಲೆ 15 ಲಕ್ಷ ರೂಪಾಯಿ ಇರುತ್ತದೆ ಎಂದರೆ ಸರಿ. ಉಳಿದ ಆಸ್ತಿಗಳ ಬೆಲೆ ಸದರಿ ಸ್ವತ್ತಿನಷ್ಟು ಇಲ್ಲ ಎಂದರೆ ಸರಿ. ನಾನು ನಮ್ಮ ತಂದೆಯ ಜೊತೆ ಶಾಮೀಲಾಗಿ ದಾವ ಐಟಂ ನಂಬರ್ 7 ನ್ನು ತನ್ನ ಹೆಸರಿಗೆ ಬರೆಸಿಕೊಳ್ಳಲು ಪ್ರಯತ್ನಿಸಿರುತ್ತೇನೆಂದರೆ ಸರಿಯಲ್ಲ. ಹಾಗೇ ಮಾಡಲು ಕಾನೂನು ಪ್ರಕಾರ ಸಾಧ್ಯವಿಲ್ಲದ ಕಾರಣ 1 ನೇ ಪ್ರತಿವಾದಿಯ ಜೊತೆ ಶಾಮೀಲಾಗಿ ಈ ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಸದರಿ ಆಸ್ತಿಯನ್ನು ಲಪಾಟಿಸಲು ಪ್ರಯತ್ನಿಸುತ್ತಿದ್ದೇನೆಂದರೆ ಸರಿಯಲ್ಲ. ಚಿಕ್ಕಕೆಂಪಣ್ಣರವರ ಇತರೆ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡದೇ ಇರುವುದರಿಂದ ಈ ಊರ್ಜಿತ ಅಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ವ್ಯವಸಾಯ ಮಾಡಿ ಮನೆ ನಿರ್ಮಿಸಿದ್ದು, ಈಗ ಈ ಸುಳ್ಳು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪಾಲು ಪಟ್ಟಿಯ ಪ್ರಕಾರ ನಾನು ಮತ್ತು 2 ನೇ ಪ್ರತಿವಾದಿ ಎಲ್ಲಾ ಆಸ್ತಿಗಳನ್ನು ಸಮಾನವಾಗಿ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಅದರಂತೆ 1 ನೇ ಪ್ರತಿವಾದಿ 10 ಲಕ್ಷ ರೂಪಾಯಿ ಹಣ ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ. ಸದರಿ ವಿಭಾಗ ಪತ್ರ 1 ನೇ ಪ್ರತಿವಾದಿಯ ಬಳಿ ಇದೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ..**